**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ರೋಣ**

ಸಿ.ಸಿ. ನಂ.804/2020

ಸಿ.ಡಬ್ಲೂಃ 1 ಪಿ.ಡಬ್ಲೂಃ 1

ಹೆಸರುಃ ಶಿವನಗೌಡ

ತಂದೆಯ ಹೆಸರುಃ ಬಸವನಗೌಡ ಜಕ್ಕನಗೌಡ್ರ

ವಯಸ್ಸುಃ 42 ವರ್ಷ

ಉದ್ಯೋಗಃ ಆಟೋ ಕನ್ಸಲಟೆಂಟ್

ವಿಳಾಸಃ ಬಳ್ಳಾರಿ

**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 12-01-2023 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

1. 1 ಮತ್ತು 2 ನೇ ಆರೋಪಿತರು ನನ್ನ ಅಣ್ಣನ ಹೆಂಡತಿ ಮತ್ತು ಅಣ್ಣನ ಮಗ. ಚಾಸಾ8 ನನ್ನ ಅಣ್ಣನ ಮಗ. ದಿಃ 16/05/2020 ರಂದು ಸಾಯಂಕಾಲ 5-30 ಕ್ಕೆ ನಾನು , ನನ್ನ ಅಣ್ಣ ಶೇಖರಗೌಡ , ವೀರುಪಾಕ್ಷ ಶಿರೋಳ, ಹಾಗೂ ಕೆ ಕೆ ಮುಲ್ಲಾ ಮತ್ತು ನವಲಗುಂದ ಸಂಗಪ್ಪ ಹಾಗೂ ನಮ್ಮ ಮನೆಯ ಪಕ್ಕ ಶಿವಾನಂದ ಹಾಗೂ ಅಣ್ಣನ ಮಕ್ಕಳಾದ ವಿನಾಯಕ ಎಲ್ಲರೂ ಸೇರಿ ರೋಣದ ಸಾಧು ಅಜ್ಜನ ಮಠದ ಹತ್ತಿರ ಇರುವ ನಮ್ಮ ಮನೆಯಲ್ಲಿ ಇದ್ದೆವು. ಅಲ್ಲಿ ವಾಟ್ನಿ ಸಂಬಂಧ ಮಾತು ಕತೆ ಮಾಡುತ್ತಿದ್ದೆವು. ಆ ವೇಳೆಯಲ್ಲಿ 1 ಮತ್ತು 2 ನೇ ಆರೋಪಿತರು ನಿವೇನು ದೊಡ್ಡ ಹಿರಿಯರಾ ಎಂದು ಅವಾಚ್ಯವಾಗಿ ಬೈದರು. ನನಗೆ ಮತ್ತು ನನ್ನ ಅಣ್ಣನ ಮಗನಿಗೆ

ಪ್ರಶಾಂತ ಅವಾಚ್ಯವಾಗಿ ಸೂಳೆ ಮಗನೇ , ನೀನು ದೊಡ್ಡ ಹಿರಿಯಾ ಎಂದು ಸಹ ಬೈದ. ನಾವುಗಳು ಹಿರಿಯರು ಸೇರಿ, ಪಾಲು ಮಾಡಿ ಕೊಡುತ್ತೇವೆ ಎಂದು ಅವರಿಗೆ ಹೇಳಿದೆವು. ನಂತರ ನನ್ನ ಅಣ್ಣನ ಹೆಂಡತಿ ಮತ್ತು ಅವನ ಮಗ ಪ್ರಶಾಂತ ಬಂದು, ನ್ಯಾಯಾಲಯದ ಮುಂದೆ ಇರುವ ಕಟ್ಟಿಗೆಯಿಂದ ನನ್ನ ಬೆನ್ನಿಗೆ ಹೊಡೆದರು. ಹಾಗೂ ನ್ಯಾಯಾಲಯದ ಮುಂದೆ ಕಾಣುತ್ತಿರುವ ಉಳಿಯ ಹಿಂಭಾಗದಿಂದ ನನ್ನ ಬಲಭುಜಕ್ಕೆ ಹೊಡೆದರು. ಆಗ ವಿನಾಯಕ ಬಿಡಿಸಲು ಬಂದ. ಅವನಿಗೂ ಸಹ ಪ್ರಶಾಂತ ಅದೇ ಉಳಿಯ ಚೂಪಾದ ಮುಂಭಾಗದಿಂದ ಅವನ ಎಡಗೈನ ಮುಂಗೈ ಮೇಲೆ ಹೊಡೆದ. ಅವನಿಗೆ ರಕ್ತ ಬಂತು. ಲಕ್ಷ್ಮವ್ವ ನನ್ನ ಅಣ್ಣ ಮಗ ವಿನಾಯಕನಿಗೆ ಕಟ್ಟಿಗೆಯಿಂದ ಬಲಗಾಲಿಗೆ ಮತ್ತು ಬೆನ್ನಿಗೆ ಹೊಡೆದರು. ಆಗ ವೀರುಪಾಕ್ಷ ಮತ್ತು ಶೇಖರಗೌಡ ಹಾಗೂ ಶೇಖರಗೌಡನ ಹೆಂಡತಿ ಸುನಂದಾ , ಕೆ ಕೆ ಮುಲ್ಲಾ , ಸಂಗಪ್ಪ ನವಲಗುಂದ ಬಂದು ಜಗಳ ಬಿಡಿಸಿದರು. ನಂತರ ನಾನು ನನ್ನ ಕಾರನಲ್ಲಿ ವಿನಾಯಕನನ್ನು ರೋಣ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಕೊಡಿಸಿದೆ. ನಂತರ ಅಲ್ಲಿಂದ ಗದಗ ಜಿಲ್ಲಾ ಆಸ್ಪತ್ರೆಗೆ ಹೋದೆ. ನಂತರ ಗದಗ ಆಸ್ಪತ್ರೆಯಿಂದ ಬಳ್ಳಾರಿಗೆ ದಿಃ 17/05/2020 ರಂದು ಕರೆದುಕೊಂಡು ಹೋದೆ. ನಂತರ ಬಳ್ಳಾರಿಯಲ್ಲಿ ವಿಜಯನಗರ ಜಿಲ್ಲಾ ಸರ್ಕಾರಿ ಆಸ್ಪತ್ರೆಯ ವೈದ್ಯರ ಹತ್ತಿರ ಚಿಕಿತ್ಸೆ ಕೊಡಿಸಿದೆ. ನಂತರ ಅಲ್ಲಿ 25 ದಿನಆಸ್ಪತ್ರೆಯಲ್ಲಿ ವಿನಾಯಕನನ್ನು ಅಡ್ಮಿಟ್ ಮಾಡಿದೆವು. ನಂತರ ದಿಃ 17/05/2020 ರಂದು ನಾನು ಪೊಲೀಸ ಠಾಣೆಗೆ ಹೋಗಿ ದೂರು ಕೊಟ್ಟೆ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಯಿತು. ಅದನ್ನು ಸಾಕ್ಷಿ

ನೋಡಿ, ಅದರಲ್ಲಿರುವ ಸಹಿಯನ್ನು ತನ್ನದು ಎಂದು ಹೇಳಿರುತ್ತಾರೆ. ಸದರಿ ದಾಖಲೆ ದೂರಾಗಿದ್ದು, ಅದನ್ನು ನಿಪಿಃ 1 ಎಂದು ಸಾಕ್ಷಿಯ ಸಹಿಯನ್ನು ನಿಪಿಃ 1 ಎ ಎಂದು ಗುರುತಿಸಲಾಯಿತು. ದೂರು ಕೊಟ್ಟ ಮಾರನೇ ದಿನ ಪೊಲೀಸರು ಬಂದು ನಾನು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮಾಡಿದರು. ಸ್ಥಳವನ್ನು ಪರಿಶೀಲನೆ ಮಾಡಿ, ಅಲ್ಲಿ ಅಕ್ಕ ಪಕ್ಕದವರಿಗೆ ವಿಚಾರಿಸಿ , ಸ್ಥಳದಲ್ಲಿದ್ದ ಕಟ್ಟಿಗೆ ಮತ್ತು ಕಬ್ಬಿಣ್ಣದ ಉಳಿಯನ್ನು ಪೊಲೀಸರು ವಶಪಡಿಸಿಕೊಂಡರು. ಸದರಿ ಪಂಚನಾಮೆಯನ್ನು ಸಾಕ್ಷಿ ನೋಡಿ ಒಪ್ಪಿದ್ದರಿಂದ ಅದನ್ನು ನಿಪಿಃ 2 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿಃ 2 ಎ ಎಂದು ಗುರುತಿಸಲಾಯಿತು. ಪಂಚನಾಮೆ ಮಾಡುವಾಗ ಶಿವನಾಂದ ಜಗ್ಗಲ ಮತ್ತು ಬಸವರಾಜ ಜಗ್ಗಲ ಮತ್ತು ಚವಡಿ ಎಂಬುವವರ ಮಗ ವೀರುಪಾಕ್ಷ ಮತ್ತು ಕೆ ಕೆ ಮುಲ್ಲಾ ಇದ್ದರು. ನ್ಯಾಯಾಲಯದ ಮುಂದೆ ಇರುವ ಕಟ್ಟಿಗೆ ಮತ್ತು ಕಬ್ಬಿಣ್ಣದ ಉಳಿಯನ್ನು ಸಾಕ್ಷಿ ನೋಡಿ ಗುರುತಿಸಿ , ಇದೇ ವಸ್ತುಗಳಿಂದ ಆರೋಪಿತರು ನಮಗೆ ಹಲ್ಲೆ ಮಾಡಿದ್ದಾಗಿ ಹೇಳಿರುತ್ತಾರೆ. ಸದರಿ ಕಟ್ಟಿಗೆ ಮತ್ತು ಕಬ್ಬಿಣದ ಉಳಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ಮೂ. ಮಾ.1 ಮತ್ತು 2 ಎಂದು ಗುರುತಿಸಲಾಯಿತು. ಆರೋಪಿತರು ಆ ದಿನ ನಮಗೆ ನಿಮ್ಮನ್ನು ನೋಡಿಕೊಳ್ಳುತ್ತೇವೆ, ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿದರು. ನಮಗೆ ಹಲ್ಲೆ ಮಾಡಿದವರನ್ನು ನೋಡಿದರೆ ಗುರುತಿಸಬಲ್ಲೆ . ಈ ದಿನ ಆರೋಪಿತರ ಪರ ವಕೀಲರು ಆರೋಪಿತರು ಗೈರು ಹಾಜರಿದ್ದು, ಅವರ ಗುರುತಿಸುವಿಕೆಗಾಗಿ ತಕರಾರು ಇಲ್ಲ ಎಂದು ಅರ್ಜಿ ನೀಡಿರುತ್ತಾರೆ. ಪೊಲೀಸರು ಫೋಟೋ ತೆಗೆದಿರುತ್ತಾರೆ.

**ಪಾಟೀ ಸವಾಲುಃ- ಕೋರಿಕೆಯ ಮೇರೆಗೆ ಮೂಂದುಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**

**ಹೆಚ್ಚುವರಿ ಸಿವಿಲ್ ಹಾಗೂ ಜೆ .ಎಮ್ .ಎಫ್.ಸಿ**

**ನ್ಯಾಯಾಧೀಶರು ರೋಣ .**